## ಹಾಡು ಕಳೆಗಟ್ಟಿದ ಸಮಯ

ಗೀತೆಗಳ ಚಿತ್ರೀಕರಣಕ್ಕೆಂದು ಸ್ಕಾಟ್ಲೆಂಡ್‌ಗೆ ತೆರಳಿದ್ದ ಹರ್ಷ ನಿರ್ದೇಶನದ 'ಅಂಜನಿಪುತ್ರ' ಚಿತ್ರತಂಡ ತವರಿಗೆ ಹಿಂತಿರುಗಿದೆ. ಇದರೊಂದಿಗೆ ಚಿತ್ರದ ಮುಕ್ಕಾಲು ಪಾಲು ಚಿತ್ರೀಕರಣ ಮುಗಿದಂತಾಗಿದೆ. ಈ ವರ್ಷದ ಕೊನೆಯಲ್ಲಿ ಸಿನಿಮಾ ತೆರೆಕಾಣಲಿದೆ.

ಪುನೀತ್ ರಾಜ್‌ಕುಮಾರ್ ನಟನೆಯ ಹಿಂದಿನ ಸಿನಿಮಾ 'ರಾಜ್‌ಕುಮಾರ' ಗೀತೆಗಳ ಕಾರಣದಿಂದಾಗಿಯೂ ನೋಡುಗರ ಗಮನಸೆಳೆದಿತ್ತು. 'ಅಂಜನಿಪುತ್ರ'ದಲ್ಲಿ ಕೂಡ ಗೀತೆಗಳನ್ನು ಆಕರ್ಷಕವಾಗಿ ಚಿತ್ರಿಸಲು ನಿರ್ದೇಶಕ ಹರ್ಷ ಪ್ರಯತ್ನಿಸಿದ್ದಾರೆ. ಆ ಕಾರಣದಿಂದಾಗಿಯೇ ಸ್ಕಾಟ್ಲೆಂಡ್‌ನ ಸುಂದರ ಹೊರಾಂಗಣದಲ್ಲಿ ಅವರು ತಮ್ಮ ಚಿತ್ರದ ಗೀತೆಗಳನ್ನು ಚಿತ್ರಿಸಿದ್ದಾರೆ. ಅಂದಹಾಗೆ, ಇದು ರೀಮೇಕ್ ಸಿನಿಮಾ. ತಮಿಳಿನ 'ಪೂಜೈ' ಚಿತ್ರ ಕನ್ನಡದಲ್ಲಿ 'ಅಂಜನಿಪುತ್ರ'ನ ರೂಪ ಪಡೆದಿದೆ.

'ಕಿರಿಕ್ ಪಾರ್ಟಿ'ಯ ರಶ್ಮಿಕಾ ಮಂದಣ್ಣ 'ಅಂಜನಿಪುತ್ರ'ದಲ್ಲಿ ಪುನೀತ್‌ಗೆ ಜೋಡಿ. ಚೊಚ್ಚಿಲ ಚಿತ್ರದಲ್ಲೇ ದೊಡ್ಡ ಯಶಸ್ಸನ್ನು ಪಡೆದಿರುವ ರಶ್ಮಿಕಾ, ಎರಡನೇ ಸಿನಿಮಾದಲ್ಲಿ ಮತ್ತೆ ಗೆಲುವು ಸವಿಯುವ ನಿರೀಕ್ಷೆಯಲ್ಲಿದ್ದಾರೆ. ಹರ್ಷ ಅವರ ಪಾಲಿಗೂ ಇದು ಮಹತ್ವಾಕಾಂಕ್ಷೆಯ ಸಿನಿಮಾ. 'ಭಜರಂಗಿ', 'ವಜ್ರಕಾಯ'ದ ನಂತರ 'ಅಂಜನಿಪುತ್ರ'ದ ಮೂಲಕ ಅವರು ಮತ್ತೊಂದು ದೊಡ್ಡ ಯಶಸ್ಸಿನ ನಿರೀಕ್ಷೆಯಲ್ಲಿದ್ದಾರೆ.





## ರಾಧಿಕಾ ಬದಲಾಗಿಲ್ಲ!

ಕನ್ನಡ ಚಿತ್ರರಂಗದ ಬೇಡಿಕೆಯ ನಾಯಕಿಯರಲ್ಲಿ ರಾಧಿಕಾ ಪಂಡಿತ್ ಕೂಡ ಒಬ್ಬರು. ಈ ವರ್ಷ ರಾಧಿಕಾ ನಟನೆಯ ಒಂದು ಸಿನಿಮಾ ಕೂಡ ಬಿಡುಗಡೆಯಾಗಿಲ್ಲ. ಸದ್ಯಕ್ಕವರು ಯಾವ ಸಿನಿಮಾದಲ್ಲೂ ನಟಿಸುತ್ತಿಲ್ಲ. ಹಾಗಿದ್ದರೂ ಅವರು ಬೇಡಿಕೆಯ ಕನ್ನಡ ಕಲಾವಿದೆಯರಲ್ಲೊಬ್ಬರು! ಮದುವೆಯ ನಂತರವೂ ರಾಧಿಕಾ ಅವರಿಗೆ ಸಾಕಷ್ಟು ಅವಕಾಶಗಳು ಹುಡುಕಿಕೊಂಡು ಬಂದಿವೆಯಂತೆ. ಕೆಲವು ಕಥೆಗಳನ್ನೂ ಅವರು ಕೇಳಿದ್ದಾರೆ. ಆದರೆ, ಅವರು ಯಾವ ಸಿನಿಮಾವನ್ನೂ ತೀರಾ ಇತ್ತೀಚಿನವರೆಗೂ ಒಪ್ಪಿಕೊಂಡಿರಲಿಲ್ಲ. ಹಾಗೆ ನೋಡಿದರೆ, ಮದುವೆಗೆ ಮುನ್ನ ರಾಧಿಕಾ ಬಂದ ಸಿನಿಮಾಗಳನ್ನೆಲ್ಲ ಒಪ್ಪಿಕೊಂಡವರಲ್ಲ. ಅಳೆದೂ ತೂಗಿ ಪಾತ್ರಗಳನ್ನು ಆರಿಸಿಕೊಳ್ಳುತ್ತಿದ್ದ ಜಾಣ್ಮೆ ಅವರದು.

ಮದುವೆ ನನ್ನ ಕೌಟುಂಬಿಕ ಜೀವನದಲ್ಲಿ ಕೆಲವು ಬದಲಾವಣೆಗಳನ್ನು ಉಂಟುಮಾಡಿರಬಹುದು. ಆದರೆ, ಕಲಾವಿದೆಯಾಗಿ ಮದುವೆಯಿಂದ ನನ್ನಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ಈಗಲೂ ಒಳ್ಳೆಯ ಪಾತ್ರ ಸಿಕ್ಕರೆ ಅಭಿನಯಿಸಲು ಸಿದ್ಧ ಎನ್ನುವ ಅವರು, ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ ಚಿತ್ರವೊಂದನ್ನು ಒಪ್ಪಿಕೊಂಡಿದ್ದಾರೆ. ನಿರೂಪ್ ಭಂಡಾರಿ ನಾಯಕರಾಗಿ ಅಭಿನಯಿಸುವ ಈ ಸಿನಿಮಾವನ್ನು ಪ್ರಿಯಾ ಎನ್ನುವವರು ನಿರ್ದೇಶಿಸುತ್ತಿದ್ದಾರೆ.

ನಟನೆಯ ಜೊತೆಗೆ ನಿರ್ಮಾಣದ ಕುರಿತು ರಾಧಿಕಾ ಯೋಚಿಸುತ್ತಿದ್ದಾರೆ. ತಮ್ಮ ಹೋಂ ಬ್ಯಾನರ್‌ನಲ್ಲಿ ಒಂದಷ್ಟು ಅರ್ಥಪೂರ್ಣ ಸಿನಿಮಾಗಳನ್ನು ರೂಪಿಸುವ ಉದ್ದೇಶ ಅವರದು. ಆದರೆ, ಸಿನಿಮಾ ನಿರ್ಮಾಣಕ್ಕೆ ಸಂಬಂಧಿಸಿದಂತೆ ಅವರು ಅವಸರದಲ್ಲಿಲ್ಲ. ತಡವಾದರೂ ಚಿಂತೆಯಿಲ್ಲ, ಒಳ್ಳೆಯ ಗುಣಮಟ್ಟದ ಸಿನಿಮಾಗಳನ್ನೇ ನಿರ್ಮಿಸಬೇಕು ಎನ್ನುವ ಹಂಬಲ ಅವರದು.